Government of Karnataka
ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, ಗದಗ
Karnataka State Rural Development and Panchayat Raj University, Gadag
ರೈತ ಭವನ, ಜನರಲ್ ಕಾರ್ಯಪ್ಪ ವೃತ್ತ, ಗದಗ– 582 101
Raith Bhavan Building, Genral Carippa Circle, Gadag – 582 101
email: registrarksrdpru@gmail.com Office Phone: 08372-230338, Fax:08372-297343

ಕ್ರಮ ಸಂಖ್ಯೆ : ಕರಾಗ್ರಾಅಪಂರಾವಿವಿ/ಅಶಿನೇ/2018–19 ದಿನಾಂಕ: 07–08–2018

## ಪತ್ರಿಕಾ ಪ್ರಕಟಣೆ

**ವಿಷಯ: ಅತಿಥಿ ಉಪನ್ಯಾಸಕರು ಮತ್ತು ಇತರೆ ತಾತ್ಕಾಲಿಕ ಅಧ್ಯಾಪಕರ ನೇಮಕಾತಿ ಕುರಿತು.**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ, 2018–19ನೇ ಸಾಲಿಗೆ ಎಂ.ಎಸ್‌ಸಿ ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ, ಮತ್ತು ಎಂ.ಪಿ.ಹೆಚ್ ಕೋರ್ಸುಗಳನ್ನು ಬೋಧಿಸಲು ಪೂರ್ಣಕಾಲಿಕ/ಅರೆಕಾಲಿಕ ಅತಿಥಿ ಉಪನ್ಯಾಸಕರನ್ನು / ಸಂಶೋಧನಾ / ಪ್ರಾಜೆಕ್ಟ್ ಫೆಲೋಗಳನ್ನು ತಾತ್ಕಾಲಿಕವಾಗಿ ನೇಮಕ ಮಾಡಲು ಈ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು, (M.Sc./M.Tech/MPH) ಕನಿಷ್ಟ ಶೇ.55 ಅಂಕಗಳನ್ನು ಪಡೆದಿರಬೇಕು. ಅದಕ್ಕೆ ಸಂಬಂದಪಟ್ಟ ವಿಷಯದಲ್ಲಿ ಪಿಎಚ್.ಡಿ ಹೊಂದಿರಬೇಕು ಅಥವಾ NET/SLET/KSET ಅರ್ಹತೆ ಪಡೆದಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಸ್ವ-ವಿವರ ಮತ್ತು ಅಗತ್ಯ ದಾಖಲೆಗಳೊಂದಿಗೆ ಅರ್ಜಿಗಳನ್ನು **ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ರೈತಭವನ, ಗದಗ–582101,** ಇವರಿಗೆ ದಿನಾಂಕ **13–08–2018** ರೊಳಗೆ ತಲುಪುವಂತೆ ಕಳುಹಿಸಿ. ಅರ್ಹ ಅಭ್ಯರ್ಥಿಗಳಿಗೆ, ವಿಶ್ವವಿದ್ಯಾಲಯದ ಕಛೇರಿ, ಗದಗದಲ್ಲಿ ಸಂದರ್ಶನ ನಡೆಸಲಾಗುವುದು. ಸಂದರ್ಶನದ ದಿನಾಂಕವನ್ನು ಇ-ಮೇಲ್/ವಾಟ್ಸಪ್/ಎಸ್.ಎಮ್.ಎಸ್./ಫೋನ್/ ವಿಶ್ವವಿದ್ಯಾಲಯದ ವೆಬ್‌ಸೈಟನಲ್ಲಿ ತಿಳಿಸಲಾಗುವುದು. ವಿವರಗಳಿಗೆ ಮತ್ತು ಸಂದರ್ಶನದ ದಿನಾಂಕಗಳಿಗೆ ವಿಶ್ವವಿದ್ಯಾಲಯದ ಅಂತರ್ಜಾಲವನ್ನು www.ksrdpru.in ನೋಡಬಹುದು. ಈ ವಿಷಯಗಳಲ್ಲಿ, ಬೇರೆ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಅಧ್ಯಾಪಕರು ನಿಯೋಜನೆ ಮೇಲೆ ಬರಲು ಸಹ ಅರ್ಜಿ ಸಲ್ಲಿಸಬಹುದು. ಗೌರವ/ಎಮಿರಿಟಸ್ ಪ್ರೊಫೆಸರ್/ಸಂದರ್ಶಕ ಶಿಕ್ಷಕರಾಗಿ ಕಾರ್ಯನಿರ್ವಹಿಸಲು ಇಚ್ಛಿಸುವವರು ಸಹಾ ಅರ್ಜಿ ಸಲ್ಲಿಸಬಹುದು.

**ಗೌರವಧನ:** ಪೂರ್ಣಕಾಲಿಕ ಅತಿಥಿ ಉಪನ್ಯಾಸಕರಿಗೆ ಯು.ಜಿ.ಸಿ. ನಿಯಮಗಳನ್ವಯ ಕಾರ್ಯಗಳಿಗೆ ಕ್ರೋಢಿಕೃತವಾಗಿ ತಿಂಗಳಿಗೆ ರೂ.35,000/– (ಮೂವತ್ತೈದು ಸಾವಿರಗಳು ಮಾತ್ರ) ನೀಡಲಾಗುವುದು ಮತ್ತು ಅರೆಕಾಲಿಕ ಅತಿಥಿ ಉಪನ್ಯಾಸಕರಿಗೆ ಪ್ರತಿ ಘಂಟೆಯ ಮಾದರಿಯಲ್ಲಿ ಪಾವತಿಸಲಾಗುವುದು. ಪೂರ್ಣಕಾಲಿಕ ಸಂಶೋಧನಾ ಸಹಾಯಕರಿಗೆ ತಿಂಗಳಿಗೆ ರೂ.30,000/– (ಮೂವತ್ತು ಸಾವಿರಗಳು ಮಾತ್ರ) ನೀಡಲಾಗುವುದು. ಗೌರವ/ಎಮಿರಿಟಸ್ ಪ್ರೊಫೆಸರ್/ಸಂದರ್ಶಕ ಶಿಕ್ಷಕರಿಗೆ ವಿಶ್ವವಿದ್ಯಾಲಯದ/ ಯು.ಜಿ.ಸಿ. ನಿಯಮಗಳನುಸಾರ ಸಂಭಾವನೆಯನ್ನು ಪಾವತಿಸಲಾಗುವುದು.

ಕುಲಸಚಿವರು

ಸಂಪಾದಕರು –
ಮೇಲಿನ ಪ್ರಕಟಣೆಯನ್ನು ತಮ್ಮ ದಿನಪತ್ರಿಕೆಯಲ್ಲಿ ಸುದ್ದಿಯನ್ನಾಗಿ ಪ್ರಕಟಿಸಬೇಕೆಂದು ಕೋರಲಾಗಿದೆ.